ಆ) ಪ್ರಸ್ತಾವನೆ ಇರುವುದಿಲ್ಲ.

6261(6269) ಶ್ರೀ ದೊಡ್ಡನಗೌಡ ಹನುಮನಗೌಡ ಪಾಟೀಲ್ : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಲೋಕಸೇವಾ ಆಯೋಗದಿಂದ ಪತ್ರಾಂಕಿತ ಮತ್ತು ಸ್ಪರ್ಧಾತ್ಮಕ "ಎ" ಮತ್ತು "ಬಿ" ಗುಂಪಿನ ಹುದ್ದೆಗಳ ಸಂದರ್ಶನಕ್ಕೆ (1999ನೇ ಸಾಲಿನ) ಮತ್ತು 2005ರ ಮುಖ್ಯ ಪರೀಕ್ಷೆಗೆ ಸಾಮಾನ್ಯ ವರ್ಗದಿಂದ ಮತ್ತು ಕೇಂದ್ರ ಹಾಗೂ ರಾಜ್ಯ ಮೀಸಲಾತಿ ಅನ್ವಯ ಅವಕಾಶ ಪಡೆದಿರುವ ಅಭ್ಯರ್ಥಿಗಳಾರು;

(ಹೆಸರು, ವಿದ್ಯಾರ್ಹತೆ ಮತ್ತು ಜಾತಿ ಮುಂತಾದ ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಈಗ ನಡೆಯುತ್ತಿರುವ ಪತ್ರಾಂಕಿತ ಮತ್ತು ಸ್ಪರ್ಧಾತ್ಮಕ ಹುದ್ದೆಗಳ ಸಂದರ್ಶನಕ್ಕೆ ಅರ್ಹತೆ ಪಡೆದಿರುವ ಗುಲಬರ್ಗಾ ಕಂದಾಯ ಜಿಲ್ಲೆಗಳ ಅಭ್ಯರ್ಥಿಗಳ ಸಂಖ್ಯೆ ಅತಿ ಕಡಿಮೆ ಪ್ರಮಾಣದಲ್ಲಿರುವುದು ನಿಜವಲ್ಲವೇ;

ಇ) ಹಾಗಿದ್ದಲ್ಲಿ ಗುಲಬರ್ಗಾ ಕಂದಾಯ ವಿಭಾಗದ ಜಿಲ್ಲೆಗಳ ಅಭ್ಯರ್ಥಿಗಳಿಗೆ ಆಯ್ಕೆ ಸಂದರ್ಶನದಲ್ಲಿ ಆದ್ಯತೆ ಮತ್ತು ವಿಶೇಷ ಆದ್ಯತೆ ನೀಡುವ ಕ್ರಮ ಕೈಗೊಳ್ಳುವುದು ನ್ಯಾಯಸಮ್ಮತವಲ್ಲವೇ,

ಈ) ಇಲ್ಲವಾದಲ್ಲಿ ಸೇವೆಯಲ್ಲಿಯೂ ಕೂಡಾ ಪ್ರಾದೇಶಿಕ ತಾರತಮ್ಯ ಮುಂದುವರೆಯಲು ಆಸ್ಪದ ನೀಡಿದಂತೆ ಆಗುವುದು ನಿಜವಲ್ಲವೇ: ಹಾಗಿದ್ದಲ್ಲಿ, ಸರ್ಕಾರದ ಸ್ಪಷ್ಟ ಧೋರಣೆ ಏನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) ನಿಯಮಗಳು, 1997ರನ್ವಯ 1999ನೇ ಸಾಲಿನ ಮುಖ್ಯ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಗಳಿಸಿದ ಅಂಕಗಳು ಮತ್ತು ಮೀಸಲಾತಿ ಅನುಸರಿಸಿ ಪ್ರಕಟಿಸಿರುವ ಹುದ್ದೆಗಳನ್ನು ಅನುಸರಿಸಿ ಪ್ರತಿಯೊಂದು ವರ್ಗದಲ್ಲೂ ಒಂದು ಹುದ್ದೆಗೆ ಐವರಂತೆ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗಿದೆ. ಸಂದರ್ಶನಕ್ಕೆ ಅರ್ಹರಾದ ಅಭ್ಯರ್ಥಿಗಳ ವರ್ಗವಾರು ವಿವರಗಳನ್ನು ಈ ಕೆಳಗೆ ನೀಡಲಾಗಿದೆ:–

ವರ್ಗ	ಅಭ್ಯರ್ಥಿಗಳ ಒಟ್ಟು ಸಂಖ್ಯೆ
ಸಾಮಾನ್ಯ ಅರ್ಹತೆ	480
ಪರಿಶಿಷ್ಟ ಜಾತಿ	152
ಪರಿಶಿಷ್ಟ ಪಂಗಡ	45
ಪ್ರವರ್ಗ–1	35
ಪ್ರವರ್ಗ–2ಎ	134
ಪ್ರವರ್ಗ–2ಬಿ	40
ಪ್ರವರ್ಗ–3ಎ	25
ಪ್ರವರ್ಗ–3ಬಿ	30

ಮೇಲ್ಕಂಡ ನಿಯಮಗಳನ್ವಯ 2005ನೇ ಸಾಲಿನ ಪೂರ್ವಭಾವಿ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಗಳಿಸಿದ ಅಂಕಗಳು ಹಾಗೂ ಮೀಸಲಾತಿ ನೀತಿಯನ್ನು ಅನುಸರಿಸಿ ವಿವಿಧ ವರ್ಗಗಳಿಗೆ ಮೀಸಲಾದ ಹುದ್ದೆಗಳಿಗೆ 1:20ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ಮುಖ್ಯ ಪರೀಕ್ಷೆಗೆ ಆಯ್ಕೆ ಮಾಡಲಾಗಿದೆ. ಅವುಗಳ ವಿವರ ಈ ಕೆಳಕಂಡಂತಿದೆ:–

ವರ್ಗ	ಅಭ್ಯರ್ಥಿಗಳ ಒಟ್ಟು ಸಂಖ್ಯೆ
ಸಾಮಾನ್ಯ ಅರ್ಹತೆ	1,499
ಪರಿಶಿಷ್ಟ ಜಾತಿ	471
ಪರಿಶಿಷ್ಟ ಪಂಗಡ	144
ಪ್ರವರ್ಗ–1	159
ಪ್ರವರ್ಗ–2ಎ	401
ಪ್ರವರ್ಗ–2ಬಿ	101
ಪ್ರವರ್ಗ–3ಎ	126
ಪ್ರವರ್ಗ–3ಬಿ	122

ಆ) ಮತ್ತು ಇ) ಮೇಲ್ಕಂಡ ನಿಯಮಗಳಡಿ ಆಯ್ಕೆ ಪ್ರಕ್ರಿಯೆಯಲ್ಲಿ ಜಿಲ್ಲಾವಾರು ಅಥವಾ ಪ್ರದೇಶಾವಾರು ಪ್ರಾತಿನಿಧ್ಯತೆ ನೀಡಲು ಆಸ್ಪದವಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

5363(6014) ಶ್ರೀ ಗಡ್ಡದೇವರಮಠ್ ಗಡ್ಡಯ್ಯ ಶಿವಮೂರ್ತಯ್ಯ (ಶಿರಹಟ್ಟಿ) : ಮಾನ್ಯ ಮುಖ್ಯಮಂತ್ರಿಗಳು ಮತ್ತು ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿರಹಟ್ಟಿ ತಾಲ್ಲೂಕಿನಲ್ಲಿ ಅಕ್ರಮವಾಗಿ (ಉಸುಕು) ಮರಳನ್ನು ಲಾರಿಗಳಲ್ಲಿ ಸಾಗಿಸುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಅಕ್ರಮವಾಗಿ (ಉಸುಕು) ಮರಳು ತುಂಬಿದ ಲಾರಿಗಳು ರಸ್ತೆ ಮೇಲೆ ಸಂಚರಿಸುತ್ತಿದ್ದುರಿಂದ ರಸ್ತೆಗಳು ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಅಕ್ರಮವಾಗಿ ಭಾರ ತುಂಬಿ ರಸ್ತೆಗಳ ಮೇಲೆ ಸಂಚರಿಸುವ ಲಾರಿಗಳ ಮೇಲೆ ಸರಕಾರ ಕ್ರಮ ಕೈಗೊಳ್ಳುವುದೆ?

ಈ) ಇಂಥ ಲಾರಿಗಳು ಸಂಚರಿಸಿ ಹಾನಿಗೊಳಗಾದ ರಸ್ತೆ ದುರಸ್ತಿ ಕಾರ್ಯವನ್ನು ಸರಕಾರ ಕೈಗೊಳ್ಳುವುದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಹೌದು

ಆ) ಹೌದು

ಇ) ರಸ್ತೆಯ ಮೇಲೆ ಸಂಚರಿಸುವ ವಾಹನದ ಭಾರ ಹೊರುವ ಸಾಮರ್ಥ್ಯವನ್ನು ಸೂಚಿಸುವ ಫಲಕಗಳನ್ನು ರಸ್ತೆಗಳ ಬದಿಗೆ ಹಾಕಲಾಗಿದೆ. ಅತೀ ಭಾರ ಮೊತ್ತ ಅಕ್ರಮವಾಗಿ ಸಂಚರಿಸುತ್ತಿರುವ ಲಾರಿಗಳ ಮೇಲೆ ದಂಡ ವಿಧಿಸುವ ಕ್ರಮವನ್ನು ಕೈಗೊಳ್ಳಲಾಗಿದೆ.

ಈ) ರಾಜ್ಯ ಹೆದ್ದಾರಿಗಳನ್ನು ಮೂರು ವಾರ್ಷಿಕ (2005–08) ನಿರ್ವಹಣೆ ಯೋಜನೆಯಡಿ ಕಾಮಗಾರಿ ಕೈಗೊಳ್ಳಲಾಗುವುದು. ಜಿಲ್ಲಾ ಮುಖ್ಯ ರಸ್ತೆಯ 10 ಕಿಮೀ. ಮರು ಡಾಂಬರೀಕರಣಕ್ಕಾಗಿ 2005–06ನೇ ಸಾಲಿನ ಆಯವ್ಯಯದಲ್ಲಿ ರೂ. 20.00 ಲಕ್ಷ ಅವಕಾಶ ಕಲ್ಪಿಸಲಾಗಿದ್ದು ರಸ್ತೆ ನಿರ್ವಹಣೆ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು.